ಸಾಕ್ಷಿಯನ್ನು ದಿಃ **12.01.2021** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಾದ ಶ್ರೀ ಟಿ ಎಂ ಎಸ್ ವಕೀಲರಿಂದಃ**

ಎಂ. ನಟರಾಜು ಬಿನ್ ಮಾದಪ್ಪ, ವಯಸ್ಸು **59** ವರ್ಷ, ನಾನು ಈ ದಾವೆಯಲ್ಲಿ ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆ. ಅದನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಹಿ ನನ್ನದ್ದೇ ಆಗಿರುತ್ತದೆ. ಈ ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ದಿನಾಂಕ **04.03.2015** ರ ಆನ್ ಡಿಮಾಂಡ್ ಪ್ರನೋಟಿನ ಮೂಲ ದಾಖಲೆ ಹಾಜರುಪಡಿಸಿದ್ದು ಅದನ್ನು ನಿಪಿ.**1** ಎಂದು, ಸದರಿ ದಾಖಲೆಯಲ್ಲಿ ಪ್ರತಿವಾದಿ ಸಹಿ ಮಾಡಿದ್ದು ಅದನ್ನು ನಿಪಿ.**1** ಎ ಎಂದು, ಸಾಕ್ಷಿಗಳಾಗಿ ಹೆಚ್.ಪಿ ರಾಜೇಶ್ ಮತ್ತು ಮಲ್ಲಿಕಾರ್ಜುನ ಸ್ವಾಮಿ ರವರು ಸಹಿ ಮಾಡಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.**1** ಬಿ ಮತ್ತು ನಿಪಿ.**1** ಸಿ ಎಂದು, ಸದರಿ ದಾಖಲೆಯನ್ನು ಶಾಂತಮೂರ್ತಿ ರವರು ಬಿಕ್ಲಂದಾರರಾಗಿ ಸಹಿ ಮಾಡಿರುತ್ತಾರೆ ಅದನ್ನು ನಿಪಿ.**1** ಡಿ ಎಂದು, ಹಣ ಸಂದಾಯ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ.**2** ಎಂದು, ಅದರಲ್ಲಿ ಪ್ರತಿವಾದಿ ಸಹಿ ಮಾಡಿದ್ದು ಅದನ್ನು ನಿಪಿ.**2** ಎ ಎಂದು, ಸಾಕ್ಷಿಗಳಾಗಿ ಹೆಚ್.ಪಿ ರಾಜೇಶ್ ಮತ್ತು ಮಲ್ಲಿಕಾರ್ಜುನ ಸ್ವಾಮಿ ರವರು ಸಹಿ ಮಾಡಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.**2** ಬಿ ಮತ್ತು ನಿಪಿ.**2** ಸಿ ಎಂದು, ಸದರಿ ದಾಖಲೆಯನ್ನು ಶಾಂತಮೂರ್ತಿ ರವರು ಬಿಕ್ಲಂದಾರರಾಗಿ ಸಹಿ ಮಾಡಿರುತ್ತಾರೆ ಅದನ್ನು ನಿಪಿ.**2** ಡಿ ಎಂದು, ದಿನಾಂಕ **16.10.2017** ರ ಪ್ರತಿವಾದಿಗೆ ನೀಡಿದ ತಿಳುವಳಿಕೆ ನೋಟೀಸಿನ ಕಚೇರಿ ಪ್ರತಿಯನ್ನು ನಿಪಿ.**3** ಎಂದು, ಒಂದು ಅಂಚೆ ರಶೀದಿಯನ್ನು ನಿಪಿ.**4** ಎಂದು, ಎರಡು ಸ್ವೀಕೃತಿಗಳನ್ನು ನಿಪಿ.**5** ಮತ್ತು ನಿಪಿ.**6** ಎಂದು, ದಿನಾಂಕ **30.10.2017** ರಂದು ಪ್ರತಿವಾದಿಯ ವಾರಸುದಾರರಿಗೆ ನೀಡಿರುವ ತಿಳುವಳಿಕೆ ನೋಟೀಸಿನ ಕಚೇರಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ.**7** ಎಂದು, ಅಂಚೆ ಇಲಾಖೆಯಿಂದ ಎರಡು ಹಿಂಬರಹಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.**8** ಮತ್ತು ನಿಪಿ.**9** ಎಂದು, ದಾವಾ ಆಸ್ತಿಗೆ ಸಂಬಂಧಿಸಿದ ಮ್ಯು ಟೇಷನ್ ರಿಜಿಸ್ಟರ್ ನ್ನು ಹಾಜರುಪಡಿಸಿದ್ದು ಅದನ್ನು ನಿಪಿ.**10** ಎಂದು, ಸರ್ವೆ ನಂಬರ್ **50/8** ಆಸ್ತಿಗೆ ಸಂಬಂಧಿಸಿದ ಒಂದು ಆರ್ ಟಿ ಸಿ ಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ.**11** ಎಂದು, ಸರ್ವೆ ನಂಬರ್ **92/8** ಪಿ ಆಸ್ತಿಗೆ ಸಂಬಂಧಿಸಿದ ಒಂದು ಆರ್ ಟಿ ಸಿ ಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ.**12** ಎಂದು, ಒಂದು ಅಂಚೆ ಲಕೋಟೆಯನ್ನು ನಿಪಿ.**13** ಎಂದು, ಅದರೊಳಗಿನ ನೋಟೀಸನ್ನು ನಿಪಿ.**13** ಎ ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಹೇಳಿದ ಸಾಕ್ಯವನ್ನು ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿದ ನಂತರ, ಓದಿ ಹೇಳಿದ ಮೇರೆಗೆ ಸಾಕ್ಷಿ ಸರಿ ಇದೆ ಎಂದು ಒಪ್ಪಿ ತಮ್ಮ ಸಹಿ ಮಾಡಿರುತ್ತಾರೆ.)

ಓ ಹೇ ಕೇ ಸ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು
ಜೆ.ಎಂ.ಎಫ್.ಸಿ. ತಿ.ನರಸೀಪುರ